6	ಮಾರದೇವನಹಳ್ಳಿ ಕೆರೆ	40.50
7	ಮಾದನಾಯ್ಕನಹಳ್ಳಿ ಕೆರೆ	40.50
8	ಬಾಣೋಜಿಪಂತ್ ಕೆರೆ	48.05
9	ಕೊಕ್ಕರೆಬೆಳ್ಳೂರು ಕೆರೆ	67.00
10	ಕೂಳಗೆರೆ ಕೆರೆ	48.00
	ಒಟ್ಟು	**678.55**
	ಏತ ನೀರಾವರಿ ಯೋಜನೆಗಳು	
1	ಅಂಕನಾಥಪುರ ಏತ ನೀರಾವರಿ ಯೋಜನೆ	208.00
2	ನವಿಲೆ ಏತ ನೀರಾವರಿ ಯೋಜನೆ	142.00
3	ಬ್ಯಾಲದಕೆರೆ ಏತ ನೀರಾವರಿ ಯೋಜನೆ	200.00
4	ಹೆಬ್ಬೆರಳು ಏತ ನೀರಾವರಿ ಯೋಜನೆ	121.00
5	ಕದಲೂರು ಏತ ನೀರಾವರಿ ಯೋಜನೆ	200.00
6	ಕಾಡುಕೊತ್ತನಹಳ್ಳಿ ಏತ ನೀರಾವರಿ ಯೋಜನೆ	46.00
7	ಅತಗೂರು ಮಾಚಹಳ್ಳಿ ಏತ ನೀರಾವರಿ ಯೋಜನೆ	162.00
	ಒಟ್ಟು	**1079.00**
	ಪಿಕಪ್‌ಗಳು	
1	ಮಲ್ಲನಾಯ್ಕನಹಳ್ಳಿ ಪಿಕಪ್	90.00
2	ವಿಠಲಾಪುರ ಪಿಕಪ್	20.00
	ಒಟ್ಟು	**110.00**

ಕರ್ನಾಟಕ ವಿಧಾನ ಸಭೆ

46 ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ)

ಬಸವರಾಜ ಬೊಮ್ಮಾಯಿ

ಅ) ಕೊಪ್ಪಳ ಜಿಲ್ಲೆಗೆ ಸಿಂಗಟಾಲೂರು ಏತ ನೀರಾವರಿ ಯೋಜನೆಯಡಿ ಎ ಮತ್ತು ಬಿ ಸ್ಕೀಂನಲ್ಲಿ ಎಷ್ಟು ಟಿಎಂಸಿ ನೀರನ್ನು ಕಾಯ್ದಿರಿಸಲಾಗಿದೆ (ತಾಲ್ಲೂಕುವಾರು ವಿವರಗಳನ್ನು ನೀಡುವುದು);

ಸಿಂಗಟಾಲೂರು ಏತ ನೀರಾವರಿ ಯೋಜನೆಗೆ ಸ್ಕೀಂ 'ಎ' ಅಡಿ ಒಟ್ಟು 18.55 ಟಿಎಂಸಿ ನೀರನ್ನು ಹಂಚಿಕೆ ಮಾಡಲಾಗಿದ್ದು, ಜಿಲ್ಲಾವಾರು ಅಥವಾ

ತಾಲ್ಲೂಕುವಾರು ನೀರಿನ ಹಂಚಿಕೆಯನ್ನು ಮಾಡಿರುವುದಿಲ್ಲ. ರಾಜ್ಯಗಳಿಗೆ ಸ್ಕೀಂ 'ಬಿ' ನೀರಿನ ಹಂಚಿಕೆಯ ವಿಷಯವು ನ್ಯಾಯಾಧಿಕರಣದ ಮುಂದಿದೆ.

ಆ) ಹಂಚಿಕೆಯಾದ ನೀರಿನ ಪ್ರಮಾಣದಿಂದ ಯಾವ ಯಾವ ತಾಲ್ಲೂಕುಗಳಿಗೆ ಎಷ್ಟೆಷ್ಟು ಎಕರೆ ಭೂಮಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ (ತಾಲ್ಲೂಕುವಾರು ವಿವರಗಳನ್ನು ನೀಡುವುದು);

ಸಿಂಗಟಾಲೂರು ಏತ ನೀರಾವರಿ ಯೋಜನೆಗೆ ಒಟ್ಟಾರೆ ನೀರಿನ ಹಂಚಿಕೆಯಾಗಿದೆ. ಯೋಜನೆಯು ಪ್ರಗತಿಯಲ್ಲಿದ್ದು. ನೀರಾವರಿ ಸೌಲಭ್ಯದ ಕಲ್ಪನೆ ಇನ್ನೂ ಆಗಬೇಕಿದೆ.

ಇ) ಕೊಪ್ಪಳ ತಾಲ್ಲೂಕಿನಲ್ಲಿ ನಿಗದಿಪಡಿಸಿರುವ ನೀರಾವರಿ ಅಚ್ಚುಕಟ್ಟು ಪ್ರದೇಶವೆಷ್ಟು (ವಿವರಗಳನ್ನು ನೀಡುವುದು);

ಸರ್ಕಾರಿ ಆದೇಶ ಸಂ. ಜಸಂಇ 115 ವಿಬ್ಯಾಇ 2003 ದಿ. 29.06.2006 ರಡಿಯಲ್ಲಿ ಸಿಂಗಟಾಲೂರು ಏತ ನೀರಾವರಿ ಯೋಜನೆಯಿಂದ 12.03 ಟಿಎಂಸಿ ನೀರನ್ನು ಉಪಯೋಗಿಸಿಕೊಂಡು ಎರಡು ಹಂತಗಳಲ್ಲಿ ಅನುಷ್ಠಾನಗೊಳಿಸಲು. ಮೊದಲನೇ ಹಂತದಲ್ಲಿ 7.64 ಟಿಎಂಸಿ ನೀರನ್ನು ಹಾಗೂ ಎರಡನೇ ಹಂತದಲ್ಲಿ 4.39 ಟಿಎಂಸಿ ನೀರನ್ನು ಬಳಸಲು ಆದೇಶಿಸಲಾಗಿದೆ. ಈ ಎರಡು ಹಂತಗಳು ಪೂರ್ಣಗೊಂಡ ನಂತರ. ಇನ್ನುಳಿಯುವ 6.52 ಟಿಎಂಸಿ ನೀರನ್ನು ಬಳಸಲು ಸಮಗ್ರವಾಗಿ ಪರಿಶೀಲಿಸಲು ಸಹಾ ಸೂಚಿಸಲಾಗಿದೆ. ಈ ಯೋಜನೆಯಿಂದ ಹಂತ 1ರಲ್ಲಿ ಕೊಪ್ಪಳ ತಾಲ್ಲೂಕಿನ 12,390 ಎಕರೆ ಭೌತಿಕ ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಯೋಜಿಸಲಾಗಿದೆ. 2 ಹಂತಗಳ ನಂತರ ಉಳಿಯುವ 6.52 ಟಿಎಂಸಿ ನೀರನ್ನು ಬಳಸುವ ಕುರಿತು ಪರಿಶೀಲಿಸಲಾಗುತ್ತಿದ್ದು, ಅದರಲ್ಲಿ ಕೊಪ್ಪಳ ತಾಲ್ಲೂಕಿನ ಸುಮಾರು 27,796 ಎಕರೆ ಭೌತಿಕ ಪ್ರದೇಶವು ನೀರಾವರಿಗೆ ಒಳಪಡಬಹುದಾಗಿದೆ.

ಈ) ಎ ಮತ್ತು ಬಿ ಸ್ಕೀಂನ ಬಚಾವತ್ ಯೋಜನೆಯಡಿಯಲ್ಲಿ ಕೊಪ್ಪಳ ಜಿಲ್ಲೆಯ ಎಷ್ಟು ಗ್ರಾಮಗಳನ್ನು ಏತ ನೀರಾವರಿ ಯೋಜನೆಯಲ್ಲಿ ಸೇರಿಸಲಾಗಿದೆ. ಈ ಗ್ರಾಮಗಳಿಗೆ ಎಷ್ಟು ಪ್ರಮಾಣದಲ್ಲಿ ನೀರನ್ನು ಒದಗಿಸಲಾಗುತ್ತಿದೆ(ತಾಲ್ಲೂಕುವಾರು ವಿವರಗಳನ್ನು ನೀಡುವುದು);

ಸ್ಕೀಂ 'ಎ' ಅಡಿ ಕೊಪ್ಪಳ ಜಿಲ್ಲೆಯ. ಕೊಪ್ಪಳ ತಾಲ್ಲೂಕಿನ ಕೆಳಕಂಡ 8 ಗ್ರಾಮಗಳ ಒಟ್ಟಾರೆ 12,390 ಎಕರೆ ಭೌತಿಕ ಕ್ಷೇತ್ರವು ನೀರಾವರಿ ಸೌಲಭ್ಯವನ್ನು ಹೊಂದಲಿದೆ:-

1) ಬೆಳಗಟ್ಟಿ 2) ನಿಲೋಗಿ 3) ಹಳವಗಲಿ 4) ಕೆಸಾಲಮರ 5) ಹೈದರ್‌ನಗರ್ 6) ಹಟ್ಟಿ 7) ರಘುನಾಥನಹಳ್ಳಿ ಮತ್ತು ಹಳವಂಡಿ

ಉ) ಎ ಮತ್ತು ಬಿ ಸ್ಕೀಂ ಬಚಾವತ್ ಯೋಜನೆಯಡಿಲ್ಲಿ 2009-10ನೇ ಸಾಲಿನಲ್ಲಿ ಕೊಪ್ಪಳ ಜಿಲ್ಲೆಗೆ ಹೊಸದಾಗಿ ಏತ ನೀರಾವರಿ ಯೋಜನೆಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರ ಮುಂದಿದೆಯೇ?

ಪ್ರಸ್ತುತ ಇಂತಹ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಊ) ಹಾಗಿದ್ದಲ್ಲಿ ಎಷ್ಟು ಪ್ರದೇಶಗಳನ್ನು ಆಯ್ಕೆ ಮಾಡಲಾಗಿದೆ; (ತಾಲ್ಲೂಕುವಾರು ವಿವರಗಳನ್ನು ನೀಡುವುದು)?

ಪ್ರಶ್ನೆ ಉದ್ಭವಿಸುವುದಿಲ್ಲ.